

ಲೋಕದ ಜಂಜಡಗಳಿಂದ ಒಂದಷ್ಟು ಹೊತ್ತು ಕಳೆದುಹೋಗಬೇಕು ಎಂದುಕೊಂಡಿದ್ದ ಸ್ನೇಹಿತನ ಪ್ರವಾಸವೆಲ್ಲಾ ಅಶಾಂತಿಯಿಂದಲೇ ಹಾಳಾಗಿಹೋಯ್ತು. ಆ ಜೊತೆಗಾರನಿಗೆ ಅವನೆಷ್ಟೇ ಹೇಳಿದರೂ, ಶಾಂತವಾಗಿ ಕೂತುಕೊಳ್ಳುವ ಸ್ವಭಾವ ಅವನದಾಗಿರಲಿಲ್ಲ. ಪ್ರವಾಸವನ್ನು ಆಸ್ವಾದಿಸಬೇಕು ಎನ್ನುವ ಮನಸ್ಸು ಅವನಿಗಿರಲಿಲ್ಲವಾದ್ದರಿಂದ ಅವನನ್ನು ಕಂಟ್ರೋಲ್ ಮಾಡುವುದೇ ಕಷ್ಟವಾಯಿತು.

"ಇನ್ಯಾವತ್ತೂ ನಾನು ಬಾಯಿಬಡುಕರ ಜೊತೆಗೆ ಅಂತಹ ಜಾಗಕ್ಕೆ ಹೋಗಲ್ಲ ಮಾರಾಯ. ನಂಗೆ ಪ್ರವಾಸ ಮಾಡಿದ ಅನುಭವವೇ ಆಗಿಲ್ಲ, ಅಂತ ಜೊತೆಗಾರರ ಜೊತೆ ಹೋದ್ರೆ ನಮ್ಮ ಖುಷಿಯೇ ಹಾಳಾಗುತ್ತೆ. ಇನ್ನು ಒಬ್ಬನಾದರೆ ಒಬ್ಬನೇ, ಹೋಗ್ಬೇಕು ಅನ್ನಿಸಿದಾಗ ಸೀದಾ ಒಂದೊಳ್ಳೆ ಜಾಗ ನೋಡಿ ಏಕಾಂಗಿ ಪ್ರವಾಸ ಮಾಡೋದೇ ಬೆಸ್ಟ್ ಅನ್ನಿಸುತ್ತೆ ನಂಗೆ" ಎಂದು ನನ್ನ ಸ್ನೇಹಿತ ಜೊತೆಗಾರನಿಂದ ತನ್ನ ಇಡೀ ಪ್ರವಾಸವೇ ತಾನಂದುಕೊಂಡಂತೆ ಆಗಿಯೇ ಇಲ್ಲ ಎಂದು ಅಸಹಾಯಕತೆ ತೋಡಿಕೊಂಡಿದ್ದ.

ಪ್ರವಾಸ ಎಲ್ಲಿಗೆ ಹೋಗ್ತೇವೆ ಎನ್ನುವಷ್ಟೇ, ಯಾರ ಜೊತೆಗೆ ಹೋಗ್ತೇವೆ ಎನ್ನುವ ಅಂಶವೂ ಅಷ್ಟೇ ಮುಖ್ಯವಾಗುತ್ತದೆ. ಇಷ್ಟವಿಲ್ಲದ ಜೊತೆಗಾರರನ್ನು ದಾಕ್ಷಿಣ್ಯಕ್ಕೆ ಬಿದ್ದು ಕರೆದುಕೊಂಡು ಹೋಗಿ ಕೊನೆಗೆ, ಆ ಜೊತೆಗಾರರು ಅವರಿಗೆ ಬೇಕಾದ ರೀತಿಯಲ್ಲಿ ನಮ್ಮ ಪ್ರವಾಸವನ್ನು ಹೈಜಾಕ್ ಮಾಡಿ, ನಮ್ಮ ಯೋಜನೆಗಳೇ ಉಲ್ಟಾ ಹೊಡೆದರೆ ಪ್ರವಾಸದ ಸುಖವನ್ನು ಅನುಭವಿಸುವುದಾದರೂ ಹೇಗೆ? ಹಾಗಾಗಿ, ಮಳೆ ಪ್ರವಾಸದ ಪ್ಲಾನ್ ಮಾಡೋವಾಗ, ನಮ್ಮ ಮನಃಸ್ಥಿತಿಯನ್ನು ಅರ್ಥಮಾಡಿಕೊಳ್ಳುವವರನ್ನೇ ನಮ್ಮ ಪ್ರವಾಸದ ಜೊತೆಗಾರರನ್ನಾಗಿ ಮಾಡಿಕೊಳ್ಳಬೇಕು. ಅವರು ಕುಟುಂಬದ ಸದಸ್ಯರೇ ಆಗಿರಲಿ, ಆಪ್ತಸ್ನೇಹಿತರೇ ಆಗಿರಲಿ, ಸಹೋದ್ಯೋಗಿಗಳೇ ಆಗಿರಲಿ, ನಮ್ಮ ಮನಃಸ್ಥಿತಿಗೆ ಅವರು ಸೂಕ್ತರಾಗುತ್ತಾರಾ ಇಲ್ಲವಾ ಎನ್ನುವುದನ್ನು ಮೊದಲು ಖಾತರಿಪಡಿಸಿಕೊಳ್ಳಬೇಕು. ಅಥವಾ ಪ್ರವಾಸದ ಉದ್ದೇಶಗಳನ್ನು ಅವರಿಗೆ ಅರ್ಥಮಾಡಿಸಿದ ಮೇಲೆಯೇ ಅವರನ್ನು ಪ್ರವಾಸದ ಜೊತೆಗಾರರನ್ನಾಗಿ ಆಯ್ಕೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಇಡೀ ಪ್ರವಾಸವೇ ಹಾಳಾದೀತು.

## ಏಕಾಂಗಿಯಾಗಿ ಹೊರಡುವ ಖುಷಿ

ಮಳೆಗಾಲದ ಸುತ್ತಾಟದ ಜೊತೆಗಾರರಾಗಿ ಯಾರೂ ಸಿಗದಿದ್ದರೆ, ತಲೆಕೆಡಿಸಿಕೊಳ್ಳದೇ ಧೈರ್ಯ ಮಾಡಿಕೊಂಡು ನನಗೆ ನಾನೇ ಜಂಟಿ, ಎಂದು ಒಂಟಿ ಪಯಣ ಹೊರಟುಬಿಡಬೇಕು. ಮತ್ಯಾರೋ ಬರುತ್ತಾರೆ, ಜೊತೆಯಾಗುತ್ತಾರೆ ಅವರು ಬಂದ ಮೇಲೆ ಹೋದರಾಯ್ತು ಎಂದು ಪಯಣದ ಆಸೆಯನ್ನು ಅದುಮಿಟ್ಟುಕೊಂಡು ಅವರಿಗಾಗಿ ಕಾಯುತ್ತಾ ಕೂತರೆ ಮಳೆಗಾಲವೇ ಮುಗಿದುಹೋಗಬಹುದು. ಮಳೆ ಇದ್ದಾಗಲೇ ಹೋಗಬೇಕು ಬಿಟ್ಟರೆ, ಮಳೆಗಾಲ ನಮಗೋಸ್ಕರ ಕಾಯುತ್ತದಾ ಹೇಳಿ? ಹಾಗಾಗಿ ಮಳೆಗಾಲದಲ್ಲಿಯೇ ಸ್ಮರಣೀಯ ಪ್ರವಾಸ ಮಾಡಬೇಕು ಅನ್ನಿಸಿದರೆ ಏಕಾಂಗಿಯಾಗಿಯಾದರೂ ಹೊರಟುಬಿಡಬೇಕು.

ಕೆಲವೊಮ್ಮೆ ಒಂಟಿ ಪಯಣದಲ್ಲಿ ನಮಗೆ ಸಿಗುವ ಜೀವನಾನುಭವ ಜಂಟಿ ಪಯಣದಲ್ಲಿ ಸಿಗುವುದಿಲ್ಲ. ಒಂಟಿ ಪಯಣ ಮೂಡಿಸುವ ರೋಚಕತೆ, ತನ್ಮಯತೆಯೇ ವಿಶೇಷವಾಗಿರುತ್ತದೆ. ಒಂಟಿ ಪಯಣದಲ್ಲಿ ಜೊತೆಯಾಗುವ ಮಳೆಗಾಲ ಒಂದಷ್ಟು ಭಾವನೆಯನ್ನೂ ಅರಳಿಸುತ್ತದೆ. ಪಯಣದ ದಾರಿಯಲ್ಲಿ ಬಾಲ್ಯದ, ಯೌವನದ ಮಧುರ ನೆನಪುಗಳು, ಕನಸುಗಳು ಹೊಸ ಬಣ್ಣ ಲೇಪಿಸಿಕೊಂಡು, ಯಾವುದೋ ನೆಪ ಸಿಕ್ಕಿ ಅರಳಬಹುದು. ನಮ್ಮನ್ನು ನಾವು ಕಂಡುಕೊಳ್ಳಲು ಒಂಟಿಪಯಣದ ಆ ಕ್ಷಣಗಳು ಮಧುರಾನುಭೂತಿ ನೀಡಬಹುದು. ಇಂತಹ ಪ್ರವಾಸ, ಬರೀ ತಾಣವನ್ನು ನೋಡಿ ಆನಂದಿಸುವುದನ್ನು ಮಾತ್ರ ಕಲಿಸುವುದಿಲ್ಲ. ಹೊಸ ತಾಣವೊಂದರಲ್ಲಿ ಎದುರಾಗುವ ತಾಪತ್ರಯ, ಈವರೆಗೂ ಸಂಭವಿಸಿರದ ಅದ್ಯಾವುದೋ ಸನ್ನಿವೇಶವನ್ನು ಎದುರಿಸುವುದನ್ನು ಹೇಳಿಕೊಡುತ್ತದೆ.

ಎಂತಹದ್ದೇ ಸನ್ನಿವೇಶವೇ ಎದುರಾಗಲಿ, ಅದಕ್ಕೆ ಮೈಯೊಡ್ಡಿಕೊಂಡು ಪ್ರವಾಸ ಕೊಡುವ ನೋವು ನಲಿವುಗಳನ್ನೂ ಅನುಭವಿಸಿದರೆ ಪ್ರವಾಸ ಪ್ರಯಾಸ ಅನ್ನಿಸಲು ಹೇಗೆ ಸಾಧ್ಯ. ಒಂಟಿಯಾಗಿ ಸುತ್ತಾಡುವಾಗ ಸಿಗುವ ಧೈರ್ಯ, ದೃಢತೆ, ನಮ್ಮಿಷ್ಟ ಬಂದಂತೆ ಇರುವ ಸ್ವಾತಂತ್ರ್ಯ, ಕೆಲವೊಮ್ಮೆ ಜೊತೆಗಾರರು ಇದ್ದಾಗ ಸಿಗುವುದಿಲ್ಲ. ಒಂಟಿಪಯಣದಲ್ಲಿ ಸಿಗುವ ಹೊಸದಾರಿ, ಹೊಸ ಊರು, ಅಲ್ಲಿನ ಚೆಂದದ ಸ್ಥಳ ಕೊಡುವ ಧ್ಯಾನಸ್ಥ ಸ್ಥಿತಿ, ಅಲ್ಲಿ ಸಿಗುವ ಹೊಸ ಜಗತ್ತಿನ ವಿನೂತನ ಭಾವಗಳು ನಮ್ಮ ಬದುಕನ್ನೇ ಬದಲಿಸೀತು. ಹೊಸ ಜೀವನಪಾಠ ಕಲಿಸೀತು.

## ಸುತ್ತಮುತ್ತಲೂ ಇದೆ ಕಾಣದ ಜಗತ್ತು

ಮಳೆಬಿದ್ದ ಕೂಡಲೇ ದೂರ ದೂರದ ಊರುಗಳಿಗೆ, ರಾಜ್ಯಗಳಿಗೆ ತಿರುಗಾಟ ಹೋದರೆ ಮಾತ್ರ ಅದು